ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 3-11-2016

## ಪತ್ರಿಕಾ ಆಮಂತ್ರಣ

**1. ಅಧಿಕಾರ ಸ್ವೀಕಾರ ಸಮಾರಂಭ:**

**ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ನೂತನ ಅಧ್ಯಕ್ಷರಾಗಿ ಮಾಜಿ ಸಚಿವರು ಮತ್ತು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಸೀರ್ ಅಹಮದ್ ಅವರಿಂದ ಅಧಿಕಾರ ಸ್ವೀಕಾರ**

**ದಿನಾಂಕ: 4–11–2016 ರಂದು ಸಂಜೆ 4–00 ಗಂಟೆಗೆ**

**5 ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು**

**2. ಫೋರ್ ಡಿಕೇಡ್ಸ್ – ಎ ಪೈಂಟರ್ಸ್ ಜರ್ನಿ**

**ಅರ್ಪಣಾಕೌರ್ ಕೃತಿಗಳ ಅವಲೋಕನ.**

**ಪ್ರದರ್ಶನ ಉದ್ಘಾಟನೆ:**

**ಚಿರಂಜೀವಿ ಸಿಂಗ್, (ಐ.ಎ.ಎಸ್., ನಿವೃತ್ತ)**

**ದಿನಾಂಕ: 4–11–2016 ಶುಕ್ರವಾರ ಸಂಜೆ 6–00 ಗಂಟೆಗೆ**

**ಸ್ಥಳ: ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಅರಮನೆ ರಸ್ತೆ, ಬೆಂಗಳೂರು.**

## ಪತ್ರಿಕಾ ಪ್ರಕಟಣೆ

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ 9ನೇ ವಾರ್ಷಿಕ ಸಮ್ಮೇಳನ ಆಸಕ್ತರಿಂದ ಪ್ರಾತ್ಯಕ್ಷಿಕೆಗೆ ಆಹ್ವಾನ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಒಂಬತ್ತನೇ ವಾರ್ಷಿಕ ಸಮ್ಮೇಳನವನ್ನು ಡಿಸೆಂಬರ್ 20 ಮತ್ತು 21 ರಂದು ಎರಡು ದಿನಗಳ ಕಾಲ ಆಯೋಜಿಸಲಾಗಿದೆ, ಭೌತ ಮತ್ತು ಗಣಿತ ವಿಜ್ಞಾನ, ರಸಾಯನ ಮತ್ತು ಜೀವ ವಿಜ್ಞಾನ ಇಂಜಿನಿಯರಿಂಗ್ ಹಾಗೂ ಅಂತರ್ ಶಾಸ್ತ್ರೀಯ ವಿಜ್ಞಾನಗಳಿಗೆ ಸಂಬಂಧಿಸಿದ ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು ಆಸಕ್ತರಿಂದ ಆಹ್ವಾನಿಸಲಾಗಿದೆ.

ತಜ್ಞ ಸಮಿತಿಯು ಆಯ್ಕೆ ಮಾಡಿದ ಪ್ರತಿ ವಿಷಯದ 2 ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ನೀಡಲಾಗುವುದು.

"ಇಪ್ಪತ್ತೊಂದನೇ ಶತಮಾನದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರಗಳು" ಎಂಬ ಕೇಂದ್ರ ವಿಷಯದಡಿ ಸಮ್ಮೇಳನವನ್ನು ಕ್ರೈಸ್ಟ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಯೋಜಿಸಲಾಗಿದೆ. ಖ್ಯಾತ ವಿಜ್ಞಾನಿಗಳು ಮತ್ತು ಸಂಶೋಧಕರಿಂದ ಶ್ರೇಷ್ಠ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ.

ಸಂಶೋಧನಾ ಪ್ರಾತ್ಯಕ್ಷಿಕೆಗಳ ಸಾರಾಂಶವನ್ನು ನಿಗದಿತ ನಮೂನೆಯಲ್ಲಿ ಇಮೇಲ್ ಮೂಲಕ ಸಲ್ಲಿಸಲು (kstaconference2016@gmail.com) 22ನೇ ನವೆಂಬರ್ 2016 (ಮಂಗಳವಾರ) ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಯನ್ನು ಅಕಾಡೆಮಿಯ ಅಂತರ್ಜಾಲ ತಾಣದಿಂದ (http://www.kstacademy.org) ಪಡೆಯಬಹುದಾಗಿದೆ.

ಸಮ್ಮೇಳನದಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ/ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು/ಪ್ರಾಧ್ಯಾಪಕರುಗಳು, ವಿಜ್ಞಾನಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿಜ್ಞಾನಾಸಕ್ತರು ಒಳಗೊಂಡಂತೆ ಸುಮಾರು 1000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಪ್ರಕಟಣೆ ತಿಳಿಸಿದೆ.

ಎಸ್‍ಎಂ/ಎಸ್‍ಎಂ:ಜೆಡಿ:ಜಿಪಿಆರ್.

## ಭ್ರಷ್ಟಾಚಾರ ನಿಗ್ರಹ ದಳದಿಂದ

## ಸಾರ್ವಜನಿಕರ ಕುಂದುಕೊರತೆ ಸಭೆ

**ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)**

ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ಜಿಲ್ಲಾ ಪೊಲೀಸ್ ಠಾಣೆಯ ವತಿಯಿಂದ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಉಪಾಧೀಕ್ಷಕರ ನೇತೃತ್ವದಲ್ಲಿ ಆಯ್ದ ತಾಲ್ಲೂಕುಗಳ ಪ್ರವಾಸಿ ಮಂದಿರಗಳಲ್ಲಿ ಸಾರ್ವಜನಿಕರ ಕುಂದುಕೊರತೆ ಸಭೆಗಳನ್ನು ಹಮ್ಮಿಕೊಂಡಿದೆ.

ನವೆಂಬರ್ 11 ರಂದು ಹೊಸಕೋಟೆ, ನವೆಂಬರ್ 14 ರಂದು ನೆಲಮಂಗಲ, ನವೆಂಬರ್ 16 ರಂದು ಆನೇಕಲ್, ನವೆಂಬರ್ 18 ರಂದು ದೊಡ್ಡಬಳ್ಳಾಪುರ ಹಾಗೂ ನವೆಂಬರ್ 21 ರಂದು ದೇವನಹಳ್ಳಿ ತಾಲ್ಲೂಕು ಸೇರಿದಂತೆ ಆಯಾ ತಾಲ್ಲೂಕಿನ ಪ್ರವಾಸಿ ಮಂದಿರದಲ್ಲಿ ಅಂದು ಬೆಳಿಗ್ಗೆ 11-00 ಗಂಟೆಗೆ ಸಭೆ ನಡೆಯಲಿದೆ ಎಂದು ಬೆಂಗಳೂರು ಜಿಲ್ಲೆಯ ಪೊಲೀಸ್ ಉಪ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಯಾ ತಾಲ್ಲೂಕಿನ ಸಾರ್ವಜನಿಕರು ತಮ್ಮ ಕುಂದುಕೊರತೆಯೊಂದಿಗೆ ಸಭೆಗಳಲ್ಲಿ ಅಂದು ಹಾಜರಾಗಬಹುದು.

ಎಸ್‌ಎಂ:ಜೆಡಿ::ಜಿಪಿಆರ್

## ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 6-4-2016 ಮತ್ತು 24-8-2016 ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿದ್ದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಸಹಾಯಕ ನಿರ್ದೇಶಕರು ಮತ್ತು ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಗಳಿಗೆ ದಿನಾಂಕ 13-11-2016 ಮತ್ತು 14-11-2016 ರಂದು ನಿಗದಿಪಡಿಸಲಾಗಿದ್ದ ನಿರ್ದಿಷ್ಟ ಪತ್ರಿಕೆಯ (ಪತ್ರಿಕೆ -2) ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮಾತ್ರ ಅನಿವಾರ್ಯ ಕಾರಣಗಳಿಂದ ದಿನಾಂಕ 10-12-2016 ಕ್ಕೆ ಮುಂದೂಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಫೋರ್ ಡಿಕೇಡ್ಸ್: ಎ ಪೈಂಟರ್ಸ್ ಜರ್ನಿ
## ಅರ್ಪಣಾ ಕೌರ್ ಕೃತಿಗಳು: ಒಂದು ಅವಲೋಕನ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಭಾರತೀಯ ನವ್ಯಕಲೆಯ ಪ್ರಸಿದ್ಧಿಯ ಅರ್ಪಣಾ ಕೌರ್ ಅವರ ಕಲಾಕೃತಿ ಅವಲೋಕನ ಪ್ರದರ್ಶನವನ್ನು ನವೆಂಬರ್ 4 ರಂದು ಸಂಜೆ 6-00 ಗಂಟೆಗೆ ನಗರದ ಅರಮನೆ ರಸ್ತೆಯಲ್ಲಿರುವ ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಪ್ರದರ್ಶನವನ್ನು ನಿವೃತ್ತ ಐ.ಎ.ಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಅವರು ಉದ್ಘಾಟಿಸಲಿದ್ದಾರೆ. ನವೆಂಬರ್ 4 ರಿಂದ ಡಿಸೆಂಬರ್ 4ರ ವರೆಗೆ ಒಂದು ತಿಂಗಳ ಕಾಲ ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಸಾರ್ವಜನಿಕ ವೀಕ್ಷಣೆಗೆ ತೆರೆದಿರುತ್ತದೆ. ಪ್ರತಿ ಸೋಮವಾರ ಹಾಗೂ ರಾಷ್ಟ್ರೀಯ ರಜಾ ದಿನಗಳಂದು ಹೊರತು ಪಡಿಸಿ ಇತರೆ ದಿನಗಳಲ್ಲಿ ತೆರೆದಿರುತ್ತದೆ.

ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದ ಅಧೀನದಲ್ಲಿರುವ ಬೆಂಗಳೂರಿನ ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯವು ನೋಯ್ಡಾದ ಸ್ವರಾಜ್ ಆರ್ಟ್ ಆರ್ಕೈವ್ ಸಹಯೋಗದೊಂದಿಗೆ ಈ ಕಲಾ ಪ್ರದರ್ಶವನ್ನು ಹಮ್ಮಿಕೊಂಡಿದೆ.

## ಅರ್ಪಣಾ ಕೌರ್ ವ್ಯಕ್ತಿ ಪರಿಚಯ:

ಅಂತರಂಗ ಮತ್ತು ಬಾಹ್ಯದಲ್ಲಿ ತುಂಬಿ ತುಳುಕುತ್ತಿರುವ ಅರ್ಪಣಾಕೌರ್‌ರ ಕಲೆಯು ಜೀವನದ ಕರ್ತವ್ಯವನ್ನು ನೆನಪಿಸಿಕೊಳ್ಳುತ್ತಿದೆ. ಅವರ ಸ್ಥಳೀಯ ಮತ್ತು ಪಾರಮಾರ್ಥಿಕ ಸಂದರ್ಭಗಳಲ್ಲಿ ಏಕೀಕರಿಸಿದ ಸ್ವಯಂ ವೈಯಕ್ತಿಕ ಪ್ರಯೋಗಗಳು ಮತ್ತು ಅನುಭವಗಳು ಪ್ರಾಮಾಣಿಕವಾಗಿ ಚಿಂತನ ನಡೆಸುವಂತದ್ದಾಗಿದೆ. ಅರ್ಪಣಾಕೌರ್ ಕಲೆ, ಸಂಗೀತ, ಇತಿಹಾಸ ಮತ್ತು ಶ್ರೀಮಂತ ಸಾಂಸ್ಕೃತಿಕ ಪರಿಸರದಲ್ಲಿ ಹುಟ್ಟಿ ಬೆಳೆದವರು. ಅವರ ಕುಟುಂಬವು ದೇಶ ವಿಭಜನೆಯ ಸಂದರ್ಭದಲ್ಲಿ ಲಾಹೋರಿನಿಂದ ದೆಹಲಿಗೆ ನಿರಾಶ್ರಿತರಾಗಿ ಸ್ಥಳಾಂತರಗೊಂಡಿತು ಮತ್ತು ಈ ದೇಶವನ್ನೇ ತಮ್ಮ ಮನೆ ಎಂದೂ ಕರೆದುಕೊಂಡಿದ್ದರು.

ಕಲಾತ್ಮಕ ಒಡಿಸ್ಸಿಯಲ್ಲಿ ಧೃಢ ಅನಿವಾರ್ಯತೆಯನ್ನು ಒಪ್ಪಿಕೊಂಡು ಮುಂದುವರಿಸಿದ್ಧಕ್ಕಾಗಿ ಒಮ್ಮೆ ಅವರನ್ನು *'ಕರಾಳ ಸಮಯಗಳಲ್ಲಿ ಉದ್ಧರಿಸುವ ಅಂಶ'* ಎಂದು ಅರ್ಪಣಾ ಅವರ ತಾಯಿ, ಪದ್ಮಶ್ರೀ ಶ್ರೀಮತಿ ಅಜೀತ್ ಕೌರ್ ವಿವರಿಸಿದ್ಧರು. 'ಗುರ್ಬನಿ'ಯ ಧ್ವನಿ ಮುದ್ರಣವನ್ನು ಕೇಳುತ್ತಾ, ಪಂಜಾಬಿ ಜನಪದ ಸಾಹಿತ್ಯ ಮತ್ತು ತನ್ನ ತಾಯಿಯ ಬರಹಗಳನ್ನು ಓದುತ್ತಾ, ತನ್ನ ಅಜ್ಜನ ಚಿಕಣಿ ಚಿತ್ರಗಳ ಬಗೆಗಿನ ಪುಸ್ತಕಗಳನ್ನು ತಿರುವುತ್ತಾ ಅವರು ಬೆಳೆದಿದ್ದರು.

ಸಿಖ್ಖರ ನೈಜ ಸಂಪ್ರದಾಯದಿಂದ ತನ್ನ ಚಿಕ್ಕ ಪ್ರಾಯದಲ್ಲೇ ಹಂಚಿಕೊಳ್ಳುವಿಕೆಯನ್ನು ಕಲಿತ್ತಿದ್ದರು ಮತ್ತು ಈ ಅಭ್ಯಾಸವು ಮುಂದಿನ ದಿನಗಳಲ್ಲಿ ಅವರನ್ನು ನವಿರಾಗಿ ವಿವರಿಸಿತು. ಸರಿ ಸುಮಾರು 35 ವರ್ಷಗಳಿಂದ ಅರ್ಪಣಾ ಮತ್ತು ಅವರ ತಾಯಿ ಸ್ವತಂತ್ರವಾಗಿ ಕೊಳಗೇರಿ ಮಹಿಳೆಯರಿಗಾಗಿ ದತ್ತಿ ಶಾಲೆಯೊಂದನ್ನು ನಡೆಸುತ್ತಿರುವುದಲ್ಲದೇ, ದೇಶದಾದ್ಯಂತ ಹಲವಾರು ಇತರ ಪರೋಪಕಾರಿ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿಕೊಂಡಿದ್ದಾರೆ.

ಜಡ ಚಟುವಟಿಕೆಗಳಿಂದ ಹಿಡಿದು, ಮಾನವ ದುರಂತಗಳು, ಸಾಮಾಜಿಕ-ಆರ್ಥಿಕ ಅಸಮಾನತೆ ಮತ್ತು ನೈಜತೆಯವರೆಗೆ, ಧರ್ಮ, ಆಧ್ಯಾತ್ಮಕತೆ, ಪರಿಸರ; ಈ ವಿಶಿಷ್ಟ ಕಾಳಜಿ ಮತ್ತು ಸಂವೇದನೆಯು ಅವರ ಕಾರ್ಯಗಳಿಗೆ ಮತ್ತು ಶಿಕ್ಷಣಕ್ಕೆ ತನ್ನದೇ ಆದ ಒಂದು ಜೀವನದ ಮೂಲಕ ಹರಿದು ಹೋಗುತ್ತಿದೆ.

ಈ ಹಿಂದೆ ಅನೇಕ ವಿಮರ್ಶಕರು ಮತ್ತು ಬರಹಗಾರರು ಗಮನಿಸಿದಂತೆ, ವೈಯಕ್ತಿಕ ಪ್ರತ್ಯೇಕಿಕರಣ ಮತ್ತು ಗುರುತಿನೊಂದಿಗಿನ ಹೋರಾಟವುಅವರ ರಚನೆಗಳಿಗೆ ಒಂದು ಪುನರಾವರ್ತಿತ ವಸ್ತು ವಿಷಯವಾಗಿದೆ. ಆದರೂ ತನ್ನ ಕಲಾ ಜೀವನದ ಪ್ರಾರಂಭದ ಘಟ್ಟದಿಂದಲೂ ಅವರ ಸಹಜ ಗಾತ್ರದ ವ್ಯಕ್ತಿ ಚಿತ್ರಣಗಳು ಅನೇಕ ಮುಖಗಳನ್ನು ಬದಲಾಯಿಸಿವೆ ಮತ್ತು ಕಲ್ಪನೆಗಳಿಗೆ ಸಲಹಾತ್ಮಕವಾಗಿ ತನಗಿಂತಲೂ ಹೆಚ್ಚು ಬೆಳೆದಿದೆ ಮತ್ತು ಸ್ಥಿರವಾಗಿದೆ. ಅವರ ಚಿತ್ರ ಸರಣಿಗಳಾದ *'ವಿಡೋಸ್‌ಆಫ್ ವೃಂದಾವನ', 'ಲವ್ ಬಿಯಾಂಡ್ ಮೆಸ್ಯುರ್', 'ಲೇಬರರ್ಸ್', 'ವರ್ಲ್ಡ್‌ಗೋಸ್‌ಆನ್...'*ಇತ್ಯಾದಿಗಳಲ್ಲಿ ಅವರ ಕಲಾಕೃತಿಗಳು ಸಬಲೀಕರಣಗೊಂಡ ಅಂಗಗಳಂತೆ ನಟನೆ ಮಾಡುತ್ತಿರುವ ವಂಚಿತ ಮತ್ತು ನಿರ್ಲಕ್ಷಿತರನ್ನುತೆರದಿಡುವ ಸಾಮರ್ಥ್ಯ ಹೊಂದಿದೆ. ಅವರ *'ಧೃತಿ'* ಹಾಗೂ *'ಡೇಆಂಡ್ ನೈಟ್'* ನಲ್ಲಿ ಬದಲಾಗುತ್ತಿರುವ ಕಾಲಘಟ್ಟದ ಪ್ರತಿರೋಧಕ ಶಕ್ತಿಯನ್ನು ಹೊಂದಿದೆ. ಚಿತ್ರಗಳ ವಸ್ತು ವಿಷಯಗಳು ಯಾವುದೇ ಇರಲಿ, ಅವರ ಕಲಾಚಿತ್ರಗಳು ವಿಶ್ವದ ಬಗ್ಗೆ ಕಲಾವಿದನ ಗ್ರಹಿಕೆ ಮತ್ತು ಅದನ್ನು ಸರಿಪಡಿಸುವಿಕೆಗೆ ದೀರ್ಘಕಾಲಿಕ ಅವಶ್ಯಕತೆಗಳ ಬಗ್ಗೆ ಸಮಕಾಲೀನ ಹೇಳಿಕೆಗಳು ಇವೆ. ನಿಜ ಜೀವನದಲ್ಲಿ ಅಂಜುಬುರುಕಿಯಾಗಿದ್ದ ಅವರು ಕ್ಯಾನ್‌ವಾಸಿನ ಮೇಲೆ ನಿರ್ಭಯ ಹಾಗೂ ದಿಟ್ಟತನವನ್ನು ಮೆರೆದಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

## ಜಾಗೃತಿ ಅರಿವು ಸಪ್ತಾಹ: ಮುಖ್ಯಮಂತ್ರಿ ಅವರಿಂದ ಪ್ರತಿಜ್ಞಾ ವಿಧಿ ಬೋಧನೆ

ಬೆಂಗಳೂರು, ನವೆಂಬರ್ 3 (ಕರ್ನಾಟಕ ವಾರ್ತೆ)

ಜಾಗೃತಿ ಅರಿವು ಸಪ್ತಾಹದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಚಿವಾಲಯದ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಪ್ರತಿಜ್ಞಾ ವಿಧಿ ಭೋಧಿಸಿದರು.

ಆಡಳಿತದಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯನ್ನು ಕಾಯ್ದುಕೊಂಡು ಭ್ರಷ್ಟಾಚಾರ ರಹಿತ ಸೇವೆಗೆ ಮುಡಿಪಾಗಿರುತ್ತೇವೆ ಎಂದು ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಸಂದರ್ಭದಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ರಾಜ್ಯದ ಮುಖ್ಯ ಕಾರ್ಯದರ್ಶಿ ಸುಭಾಷ್ ಚಂದ್ರ ಕುಂಟಿಯಾ, ಅಪರ ಮುಖ್ಯ

ಕಾರ್ಯದರ್ಶಿಗಳಾದ ಕೆ. ರತ್ನಪ್ರಭಾ, ಐ.ಎಸ್.ಎನ್. ಪ್ರಸಾದ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಾದ ಎಲ್.ಕೆ. ಅತೀಕ್ ಮತ್ತು ತುಷಾರ್ ಗಿರಿನಾಥ್ ಅವರೂ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಗೂ ಚಿಕ್ಕಬಳ್ಳಾಪುರ ಶಾಸಕ ಡಾ: ಸುಧಾಕರ್ ಒಳಗೊಂಡಂತೆ ಗಣ್ಯಾತಿ ಗಣ್ಯರು ಈ ಸಂದರ್ಭದಲ್ಲಿ ಹಾಜರಿದ್ದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಪಲ್ಲವಿ ಆಕುರತಿ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಎಸ್‌ಎಂ/ಕೆಪಿಪಿ/ಕೆಎಂ

**ಛಾಯಾಚಿತ್ರ ಶೀರ್ಷಿಕೆ:**

**ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾಗಿ ಶ್ರೀ ಹೆಚ್.ಸಿ. ರುದ್ರಪ್ಪ ಅವರು ಇಂದು ಅಧಿಕಾರ ಸ್ವೀಕರಿಸಿದರು.**